All India Radio: Bangalore

National Bulletins In Kannada

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

26.05.2025 19.35 hrs

<><*<><>*><>

ಮುಖ್ಯಾಂಶಗಳು

- ದೇಶದ ಪ್ರಗತಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ದೇಶದಲ್ಲಿಯೇ ಒದಗಿಸುವುದು ಇಂದಿನ ಬೇಡಿಕೆಯಾಗಿದೆ - ಪ್ರಧಾನಿ ನರೇಂದ್ರ ಮೋದಿ

- ಕೋವಿಡ್‌ನ ತೀವ್ರತೆ ಇಳಿಮುಖ; ಜನರು ಭಯಭೀತರಾಗುವ ಅಗತ್ಯವಿಲ್ಲ- ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ ಮಹಾನಿರ್ದೇಶಕ ಡಾ.ರಾಜೀವ್ ಬಹ್ಲ್

- ದೇಶದ ಮಧ್ಯಮ ಉದ್ಯಮಗಳನ್ನು ಆರ್ಥಿಕ ಬೆಳವಣಿಗೆಯ ಭವಿಷ್ಯದ ಚಾಲಕ ಶಕ್ತಿಗಳಾಗಿ ರೂಪಿಸಲು ೬ ಅಂಶಗಳ ಮಾರ್ಗಸೂಚಿ ಒಳಗೊಂಡಿರುವ ವರದಿ ಬಿಡುಗಡೆ ಮಾಡಿದ ನೀತಿ ಆಯೋಗ

- ಪಾಕಿಸ್ತಾನ ಸೇನೆ ಮತ್ತು ಸರ್ಕಾರ ಭಯೋತ್ಪಾದನೆಯನ್ನು ಬೆಂಬಲಿಸುತ್ತಿದ್ದು, ಹಣಕಾಸು ನೆರವು ನೀಡುತ್ತಿವೆ - ಸಚಿವ ಡಾ.ಎಸ್.ಜೈಶಂಕರ್

- ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್; ಮಹಿಳೆಯರ ೨೫ ಮೀಟರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಭಾರತದ ಶೂಟರ್ ತೇಜಸ್ವನಿಗೆ ಚಿನ್ನದ ಪದಕ

<><*<><>*><>

ಪ್ರಧಾನಿ ನರೇಂದ್ರ ಮೋದಿ ಅವರು, ಗುಜರಾತ್‌ನಲ್ಲಿಂದು ಸುಮಾರು ೨೪ ಸಾವಿರ ಕೋಟಿ ರೂಪಾಯಿ ಮೌಲ್ಯದ ಬಹು ಅಭಿವೃದ್ಧಿ ಯೋಜನೆಗಳಿಗೆ ಲೋಕಾರ್ಪಣೆ ಮತ್ತು ಶಂಕುಸ್ಥಾಪನೆ ನೆರವೇರಿಸಿದರು. ಇದರ ಜೊತೆಗೆ ಪ್ರಧಾನಿ, ರೈಲು ಮತ್ತು ಇತರ ವಲಯಗಳಿಗೆ ಸಂಬಂಧಿಸಿದ ಗುಜರಾತ್ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿದರು. ಇವುಗಳಲ್ಲಿ ವೆರಾವಲ್ ನಡುವಿನ ವಂದೇ ಭಾರತ್ ಎಕ್ಸ್‌ಪ್ರೆಸ್ ಮತ್ತು ಅಹಮದಾಬಾದ್ ಮತ್ತು ವಲ್ಸಾದ್ ಮತ್ತು ದಾಹೋದ್ ನಿಲ್ದಾಣಗಳ ನಡುವಿನ ಎಕ್ಸ್‌ಪ್ರೆಸ್ ರೈಲು ಸೇರಿವೆ. ಇದಕ್ಕೂ ಮುನ್ನ ಗುಜರಾತ್‌ನ ದಾಹೋದ್‌ನಲ್ಲಿ ನಡೆದ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ಇಂದು ೧೪೦ ಕೋಟಿ ಭಾರತೀಯರು ಒಗ್ಗಟ್ಟಾಗಿದ್ದು, ದೇಶವನ್ನು ವಿಕಸಿತ ಭಾರತವನ್ನಾಗಿ ಮಾಡಲು ಅವಿಶ್ರಾಂತವಾಗಿ ಶ್ರಮಿಸುತ್ತಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಧ್ವನಿ: ಪ್ರಧಾನಿ ನರೇಂದ್ರ ಮೋದಿ ( ೨೬ ಸೆಕೆಂಡ್ಸ್)

ದೇಶದ ಪ್ರಗತಿಗೆ ಬೇಕಾದ ಎಲ್ಲ ಸೌಲಭ್ಯಗಳನ್ನು ದೇಶದಲ್ಲಿಯೇ ಒದಗಿಸಬೇಕೆಂಬುದು ಇಂದಿನ ಬೇಡಿಕೆಯಾಗಿದೆ. ಇಂದು ದೇಶದಲ್ಲಿ ಆಧುನಿಕ ವಾಹನಗಳು ಸಂಚರಿಸುತ್ತಿದ್ದು, ಇದಕ್ಕೆ ಮುಖ್ಯ ಕಾರಣ ನಮ್ಮ ದೇಶ ಅಭಿವೃದ್ಧಿಪಡಿಸಿರುವ ಹೊಸ ತಂತ್ರಜ್ಞಾನ ಮತ್ತು ಯುವ ಕಾರ್ಯಪಡೆ ಎಂದರು. ದೇಶೀಯ ಅಗತ್ಯತೆಗಳಿಗಾಗಿ ಸರಕುಗಳನ್ನು ಉತ್ಪಾದಿಸುತ್ತಿರಲಿ ಅಥವಾ ಭಾರತದಲ್ಲಿ ತಯಾರಿಸಿದ ಉತ್ಪನ್ನಗಳನ್ನು ವಿವಿಧ ದೇಶಗಳಿಗೆ ರಫ್ತು ಮಾಡುತ್ತಿರಲಿ, ಈ ಬೆಳವಣಿಗೆ ನಿರಂತರವಾಗಿದೆ. ಇಂಗ್ಲೆಂಡ್, ಸೌದಿ ಅರೇಬಿಯಾ, ಫ್ರಾನ್ಸ್ ಹಾಗೂ ಇತರ ಹಲವು ದೇಶಗಳ ರೈಲುಗಳು ಭಾರತದಲ್ಲಿ ತಯಾರಿಸಿದ ಭಾಗಗಳನ್ನು ಹೊಂದಿವೆ ಎಂದು ಪ್ರಧಾನಿ ತಿಳಿಸಿದರು. ನಮ್ಮ ವಿವಿಧ ಕೈಗಾರಿಕೆಗಳು,

ಎಂಎಸ್‌ಎಂಇಗಳು ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು, ಜಾಗತಿಕ ಮಾರುಕಟ್ಟೆಗಳನ್ನು ತಲುಪುತ್ತಿರುವ ಅನೇಕ ಉತ್ತಮ ಗುಣಮಟ್ಟದ ಭಾಗಗಳನ್ನು ಉತ್ಪಾದಿಸುವ ಮೂಲಕ ಅದ್ಭುತ ಕೆಲಸ ಮಾಡುತ್ತಿವೆ ಎಂದು ಹೇಳಿದರು. ಇದೇ ವೇಳೆ ಪ್ರಧಾನಿ ತಾವು ೨೦೧೪ರ ಮೇ ೨೬ರಂದು ಮೊದಲ ಬಾರಿಗೆ ಪ್ರಧಾನಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದನ್ನು ನೆನಪಿಸಿಕೊಂಡರು.

<><*<><>*><>

ದೇಶಾದ್ಯಂತ ಕೋವಿಡ್ ಪ್ರಕರಣಗಳನ್ನು ಪತ್ತೆಹಚ್ಚುವ ಇಂಟಿಗ್ರೇಟೆಡ್ ಡಿಸೀಸ್ ಸರ್ವೈಲೆನ್ಸ್ ಪ್ರೋಗ್ರಾಂ- ಐಡಿಎಸ್‌ಪಿ, ಮೂಲಕ ಸರ್ಕಾರವು ಕೋವಿಡ್ ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡುತ್ತಿದೆ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ ಮಹಾನಿರ್ದೇಶಕ ಡಾ.ರಾಜೀವ್ ಬಹ್ಲ್ ತಿಳಿಸಿದ್ದಾರೆ. ದೆಹಲಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಡಾ.ಬಹ್ಲ್, ಕೋವಿಡ್‌ನ ತೀವ್ರತೆ ಕಡಿಮೆಯಾಗಿದೆ. ಪ್ರಕರಣಗಳು ಹೆಚ್ಚುತ್ತಿರುವ ಕಾರಣಕ್ಕೆ ಪ್ರಸ್ತುತ ಭಯಭೀತರಾಗುವ ಅಗತ್ಯವಿಲ್ಲ. ಜನರು ಜಾಗರೂಕರಾಗಿರುವಂತೆ ಅವರು ಸೂಚಿಸಿದ್ದಾರೆ.

<><*<><>*><>

ಭಾರತದ ಮಧ್ಯಮ ಉದ್ಯಮಗಳನ್ನು ಆರ್ಥಿಕ ಬೆಳವಣಿಗೆಯ ಭವಿಷ್ಯದ ಚಾಲಕ ಶಕ್ತಿಗಳಾಗಿ ರೂಪಾಂತರಗೊಳಿಸಲು, ೬ ಅಂಶಗಳ ಮಾರ್ಗಸೂಚಿ ಒಳಗೊಂಡಿರುವ ವರದಿಯನ್ನು ನೀತಿ ಆಯೋಗ ಇಂದು ಬಿಡುಗಡೆ ಮಾಡಿದೆ. ಈ ವರದಿ ಪ್ರಕಾರ, ಮಧ್ಯಮ ಉದ್ಯಮಗಳು, ದೇಶದ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಕೇವಲ ಶೇಕ ೦.೩ ರಷ್ಟು ಇದ್ದರೂ, ಇವು ಶೇಕಡ ೪೦ ರಷ್ಟು ರಫ್ತು ಪಾಲನ್ನು ಹೊಂದಿವೆ. ಎಂಎಸ್‌ಎಂಇ ವಲಯ, ಭಾರತದ ಜಿಡಿಪಿಗೆ ಸುಮಾರು ಶೇಕಡ ೨೯ ರಷ್ಟು ಕೊಡುಗೆ ನೀಡುತ್ತಿದ್ದು, ಶೇಕಡ ೬೦ ಕ್ಕೂ ಹೆಚ್ಚು ಕೆಲಸಗಾರರಿಗೆ ಉದ್ಯೋಗ ನೀಡುತ್ತಿದೆ. ಮಧ್ಯಮ ಉದ್ಯಮಗಳು ಎದುರಿಸುತ್ತಿರುವ ಪ್ರಮುಖ ಸವಾಲುಗಳನ್ನು ಈ ವರದಿಯಲ್ಲಿ ದಾಖಲಿಸಿದ್ದು, ಉದ್ಯಮಗಳಿಗೆ ಹೊಂದಾಣಿಕೆಯಾಗುವ ಹಣಕಾಸು ಉತ್ಪನ್ನಗಳ ಕೊರತೆ, ಮುಂದುವರೆದ ತಂತ್ರಜ್ಞಾನಗಳನ್ನು ಅಳವಡಿಸುವಲ್ಲಿ ನಿರ್ಲಕ್ಷ್ಯ, ಸಮರ್ಪಕ ಸಂಶೋಧನೆ ಮತ್ತು ಅಭಿವೃದ್ಧಿ ಬೆಂಬಲದ ಕೊರತೆ, ಪರೀಕ್ಷಾ ಸೌಲಭ್ಯಗಳ ಅಭಾವ ಮತ್ತು ತರಬೇತಿ ಕಾರ್ಯಕ್ರಮಗಳು ಉದ್ಯಮಗಳ ಅಗತ್ಯಗಳಿಗೆ ಹೊಂದಿಕೆಯಾಗದಿರುವುದು. ಈ ಅಡಚಣೆಗಳು ಅವರ ವಿಸ್ತರಣೆ ಮತ್ತು ನಾವೀನ್ಯತೆಯ ಸಾಮರ್ಥ್ಯವನ್ನು ಕುಗ್ಗಿಸುತ್ತವೆ ಎಂದು ವರದಿ ತಿಳಿಸಿದೆ. ಈ ಸವಾಲುಗಳಿಗೆ ಉತ್ತರವಾಗಿ, ವರದಿ ಆರು ಪ್ರಮುಖ ಕ್ಷೇತ್ರಗಳಲ್ಲಿ ಗುರಿಯುತ ನೀತಿ ಹಸ್ತಕ್ಷೇಪಗಳನ್ನು ಒಳಗೊಂಡ ಸಮಗ್ರ ನೀತಿ ರೂಪವನ್ನು ಸೂಚಿಸಿದೆ.

<><*<><>*><>

ಪಾಕಿಸ್ತಾನದ ನಗರಗಳು ಮತ್ತು ಪಟ್ಟಣಗಳಲ್ಲಿ ಭಯೋತ್ಪಾದಕ ಸಂಘಟನೆಗಳು ಮುಕ್ತವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಉಲ್ಲೇಖಿಸಿದ್ದಾರೆ. ಜರ್ಮನಿಯ ದಿನಪತ್ರಿಕೆಗೆ ನೀಡಿದ ಸಂದರ್ಶನವೊಂದರಲ್ಲಿ ಸಚಿವರು, ಭಯೋತ್ಪಾದನೆಯನ್ನು ಪಾಕಿಸ್ತಾನದ ಸೇನೆ ಮತ್ತು ಸರ್ಕಾರ ಬೆಂಬಲಿಸುತ್ತಿದ್ದು, ಹಣಕಾಸು ನೆರವು ನೀಡುತ್ತಿವೆ. ಭಯೋತ್ಪಾದಕ ದಾಳಿಗಳಿಗೆ ಹೊಣೆಗಾರರಾಗಿರುವವರು ಬೆಲೆ ತೆರಲೇಬೇಕೆಂಬ ಸ್ಪಷ್ಟ ಸಂದೇಶವನ್ನು ಭಾರತ ನೀಡಿದೆ ಎಂದು ಹೇಳಿದ್ದಾರೆ. ಪಹಲ್ಗಾಮ್ ಭಯೋತ್ಪಾದನಾ ದಾಳಿಗೆ ಪ್ರತಿಯಾಗಿ ಭಾರತದ ಕ್ರಮಗಳ ಕುರಿತು ಮಾತನಾಡಿದ ಅವರು, ಭಾರತದ ಪ್ರತಿಕ್ರಿಯೆ ಮಿತಿಯಲ್ಲಿಯೇ ಇತ್ತು. ಭಾರತವು ಪಾಕಿಸ್ತಾನದ ವಾಯು ಸಂರಕ್ಷಣಾ ವ್ಯವಸ್ಥೆಗಳನ್ನು ನಿಷ್ಕ್ರಿಯಗೊಳಿಸಬಲ್ಲದು ಎಂಬುದನ್ನು ಸಾಬೀತುಪಡಿಸಿದೆ ಎಂದು ತಿಳಿಸಿದರು. ಭಾರತ ಮತ್ತು ಪಾಕಿಸ್ತಾನ ನಡುವಿನ ಕದನ ವಿರಾಮದ ಕುರಿತು ಮಾತನಾಡಿದ ಡಾ.ಎಸ್. ಜೈಶಂಕರ್, ಉಭಯ ದೇಶಗಳ ಸೇನಾ ಕಮಾಂಡರ್‌ಗಳ ನೇರ ಸಂಪರ್ಕದ ಮೂಲಕ ಗುಂಡಿನ ದಾಳಿಗಳನ್ನು ನಿಲ್ಲಿಸುವ ಬಗ್ಗೆ ಒಪ್ಪಂದವಾಗಿದೆ.

<><*<><>*><>

ಮಹಾರಾಷ್ಟ್ರದ ನಾಗ್ಪುರದ ಚಿಚೋಲಿಯಲ್ಲಿಂದು ರಾಷ್ಟ್ರೀಯ ವಿಧಿವಿಜ್ಞಾನ ವಿಶ್ವವಿದ್ಯಾಲಯ – NFSU ನಾಗ್ಪುರ ಕ್ಯಾಂಪಸ್‌ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅಡಿಪಾಯ ಹಾಕಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಮತ್ತು ಕೇಂದ್ರ ಸಚಿವ ನಿತಿನ್ ಗಡ್ಕರಿ ಉಪಸ್ಥಿತರಿದ್ದರು. NFSU ನಾಗ್ಪುರದ ಸಾರಿಗೆ ಕ್ಯಾಂಪಸ್ ಪಶ್ಚಿಮ ನಾಗ್ಪುರದ ಸುಭಾಷ್ ನಗರ ಪ್ರದೇಶದಲ್ಲಿದೆ, ಆದರೆ –NFSU ನಾಗ್ಪುರದ ಹೊಸ ಮತ್ತು ಶಾಶ್ವತ ಕ್ಯಾಂಪಸ್ ಅನ್ನು ಚಿಚೋಲಿ ಗ್ರಾಮದಲ್ಲಿ ೫೦ ಎಕರೆ ಭೂಮಿಯಲ್ಲಿ ನಿರ್ಮಿಸಲಾಗುವುದು. ಮಹಾರಾಷ್ಟ್ರದಲ್ಲಿ –NFSU ನ ಹೊಸ ಕ್ಯಾಂಪಸ್ ಸ್ಥಾಪನೆಯೊಂದಿಗೆ, ನಾಗಪುರ ಕ್ಯಾಂಪಸ್ ೧೧ ನೇ ಕ್ಯಾಂಪಸ್ ಆಗಲಿದೆ.

<><*<><>*><>

ಜರ್ಮನಿಯ ಸುಹ್ಲ್‌ನಲ್ಲಿಂದು ನಡೆದ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್ ೨೦೨೫ ರಲ್ಲಿ ಭಾರತದ ಶೂಟರ್ ತೇಜಸ್ವಿನಿ ಮಹಿಳೆಯರ ೨೫ ಮೀಟರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಮುಡಿಗೇರಿಸಿಕೊಂಡಿದ್ದಾರೆ. ವಿಶ್ವದ ಅತ್ಯಂತ ಪ್ರತಿಷ್ಠಿತ ಪಂದ್ಯಾವಳಿಯಲ್ಲಿ ಒಂದಾದ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್‌ನಲ್ಲಿ ಭಾರತವು ಪ್ರಸ್ತುತ ಮೂರು ಚಿನ್ನ, ನಾಲ್ಕು ಬೆಳ್ಳಿ ಮತ್ತು ನಾಲ್ಕು ಕಂಚಿನ ಪದಕ ಸೇರಿದಂತೆ ೧೧ ಪದಕಗಳೊಂದಿಗೆ ಪದಕ ಪಟ್ಟಿಯಲ್ಲಿ ಮುಂಚೂಣಿಯಲ್ಲಿದೆ.

<><*<><>*><>

ಭಾರತದ ಕಲ್ಲಿದ್ದಲು ಕ್ಷೇತ್ರದ ಪ್ರಯಾಣವನ್ನು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ. ಈ ಕುರಿತು ಕಲ್ಲಿದ್ದಲು ಸಚಿವ ಜಿ.ಕಿಶನ್‌ರೆಡ್ಡಿ ಅವರ ಲೇಖನವನ್ನು ಹಂಚಿಕೊಂಡ ಪ್ರಧಾನಿ ನರೇಂದ್ರ ಮೋದಿಯವರು, ಸರ್ಕಾರದ ಪರಿವರ್ತನಾ ಆಡಳಿತದ ದಶಕದಲ್ಲಿ ಭಾರತದ ಅಭೂತಪೂರ್ವ ಏರಿಕೆಯ ಕುರಿತು ಈ ಲೇಖನದಲ್ಲಿ ಉಲ್ಲೇಖಿಸಲಾಗಿದೆ ಎಂದು ತಿಳಿಸಿದ್ದಾರೆ. ಇನ್ನು ಛತ್ತೀಸ್‌ಗಢ ಮುಖ್ಯಮಂತ್ರಿ ವಿಷ್ಣು ದೇವ್ ಸಾಯಿ ಅವರ ಮತ್ತೊಂದು ಲೇಖನವನ್ನು ಹಂಚಿಕೊಂಡ ಪ್ರಧಾನಿ, ಬುಡಕಟ್ಟು ಕಲ್ಯಾಣ, ಭದ್ರತೆ ಮತ್ತು ಅಭಿವೃದ್ಧಿ ಛತ್ತೀಸ್‌ಗಡಕ್ಕೆ ಹೊಸ ಅಧ್ಯಾಯವನ್ನು ಬರೆಯುತ್ತಿದೆ ಎಂದು ಹೇಳಿದ್ದಾರೆ.

<><*<><>*><>

ಮಧುಬನಿ ಮತ್ತು ಗೊಂಡ್‌ಕಲೆಯ ಕಲಾವಿದರು, ರಾಷ್ಟ್ರಪತಿ ಭವನದಲ್ಲಿಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿದರು. ಭಾರತದ ಸಾಂಪ್ರದಾಯಿಕ ಕಲಾಪ್ರಕಾರಗಳನ್ನು ಈ ಕಲಾ ಉತ್ಸವದ ಅಡಿಯಲ್ಲಿ ಅವುಗಳ ಮೂಲ ರೂಪದಲ್ಲಿ ಪ್ರದರ್ಶಿಸಲಾಗುತ್ತಿದೆ. ಭಾರತದ ಜಾನಪದ, ಬುಡಕಟ್ಟು ಮತ್ತು ಸಾಂಪ್ರದಾಯಿಕ ಕಲಾವಿದರಿಗೆ ಈ ಉತ್ಸವವು ಒಂದು ಉತ್ತಮ ವೇದಿಕೆಯಾಗಿದ್ದು, ತಲೆಮಾರುಗಳಿಂದ ವೈವಿಧ್ಯಮಯ ಕಲೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ರಾಷ್ಟ್ರಪತಿ ಭವನದಲ್ಲಿ ಅವರು ತಂಗಿದ್ದಾಗ, ರಚಿಸಲಾದ ಅವರ ವರ್ಣಚಿತ್ರಗಳನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ವೀಕ್ಷಿಸಿದರು. ಪ್ರಮುಖ ಸಾಂಪ್ರದಾಯಿಕ ಕಲಾ ಪ್ರಕಾರಗಳಿಗೆ ಅವರು ನೀಡಿದ ಕೊಡುಗೆಯನ್ನು ಶ್ಲಾಘಿಸಿದ ರಾಷ್ಟ್ರಪತಿಗಳು, ಕಲಾತ್ಮಕ ಪ್ರಯತ್ನದಲ್ಲಿ ಯಶಸ್ಸನ್ನು ಕಾಣುವಂತೆ ಕಲಾವಿದರಿಗೆ ಶುಭ ಹಾರೈಸಿದ್ದಾರೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೮.೦೫ ಕ್ಕೆ <>*><>